

ಲಿಂಗದಹಳ್ಳಿ ಚೇತನ್ ಕುಮಾರ್

ಕಲೆ: ಮುರಳೀಧರ್ ರಾಥೋಡ್



# ಒಂದು ನರಿಯ ಆತ್ಮಹತ್ಯೆ

## ಒಂದು

ಅವರು ಮಾತು ಬಿಟ್ಟು ಈ ಯುಗಾದಿಗೆ ಐದು ವರ್ಷ. ಅವರು ಯಾರ ಜೊತೆಗೂ ಮಾತನಾಡುತ್ತಿರಲಿಲ್ಲ; ತಂದೆ-ತಾಯಿ, ಹೆಂಡತಿ-ಮಕ್ಕಳು, ತಮ್ಮ ಸೇರಿದಂತೆ ಯಾರ್‍ಯಾರ ಜೊತೆಗೂ ಮಾತನಾಡುತ್ತಿರಲಿಲ್ಲ. ಇನ್ನು ಅಕ್ಕಪಕ್ಕದವರು, ಊರವರು, ಸಂಬಂಧಿಕರ ವಿಷಯ ಬಿಡಿ, ಅವರೊಂದಿಗೆ ಮಾತಿನ ಮಾತೇ ಇರಲಿಲ್ಲ. ಅವರು ಎಲ್ಲರೊಂದಿಗೆ ಯಾಕೆ ಮಾತು ಬಿಟ್ಟರು ಎಂಬುದೇ ಈ ಕಥೆಯು. ರಾಮಚಂದ್ರರವರ ಕುಟುಂಬದಲ್ಲಿ ನಡೆದ ಒಂದು ಭೀಕರ ಘಟನೆಯು ಅವರು ಎಲ್ಲರೊಂದಿಗೆ ಮಾತು ಬಿಡಲು ಕಾರಣವಾಯಿತು. ಆ ಭೀಕರ ಘಟನೆಯು ಅವರ ತಮ್ಮನಾದ ಮಹಾದೇವನನ್ನು ತನ್ನ ಸುಳಿಯೊಳಗೆ ಸೆಳೆದುಕೊಂಡು ಕೊಂದಿತು. ಆ ಭೀಕರ ಘಟನೆಯಲ್ಲಿ ರಾಮಚಂದ್ರರ ಮಗಳಾದ ಮಮತಾ ಮತ್ತು ಅವಳ ಪ್ರಿಯಕರನು ಕೊಲೆಯಾದರು. ಅಂದಿನಿಂದ ರಾಮಚಂದ್ರರವರು ದೀರ್ಘಮೌನಕ್ಕೆ ಜಾರಿದರು.

ಅವರು ಮೂರು ಜನ ಅಣ್ಣ-ತಮ್ಮಂದಿರು. ಅವರಲ್ಲಿ ರಾಮಚಂದ್ರರೇ ಹಿರಿಯರು. ಎರಡನೆಯವರು ಮಹಾದೇವ, ಮೂರನೆಯವರು ಕೃಷ್ಣ. ಇವರ ಕುಟುಂಬದವರು ಒಳ್ಳೆಯ ಜಮೀನ್ದಾರರೇ ಆಗಿದ್ದರಿಂದ ಮೊದಲನೆಯ ಮತ್ತು ಎರಡನೆಯವರು ಚೆನ್ನಾಗಿ ಓದಿದ್ದರೂ ಜಮೀನನ್ನು ನೋಡಿಕೊಳ್ಳಲು